


# ಬಿಲಗಳು

ಗುಡ್ಡದ ಬುಡದಲ್ಲೊಂದು
ಹೆಗ್ಗಣ!
ಬಿಲದಿಂದ ಹೊರಬಂದು
ಓಡಾಡಿ, ಅತ್ತಿತ್ತ ಕಣ್ಣಾಡಿಸಿ
ಒಳಗೆ ಹೊಕ್ಕು
ಮತ್ತೆ ತಿರುಗಿ
ಹೊರಗೆ ತಲೆಮಾತ್ರ ಹಾಕಿ
ಹೇಳಿತು: 'ನಿಮಗೇನು ಗೊತ್ತು?
ಕುಳಿತಿದ್ದೇನೆ ಬೆಟ್ಟವನ್ನು ಹೊತ್ತು!'

ಸಂದೇಹ ಹುಟ್ಟಿ
ಬೆಟ್ಟವನ್ನು ಕುಟ್ಟಿ
ಅಗೆದು ತೆಗೆದುದ್ದಕ್ಕೆ
ಸಿಕ್ಕಿದ್ದು: ಖಂಡುಗ ದವಸ!

ಗದ್ದುಗೆ, ಪಲ್ಲಕ್ಕಿಗಳನ್ನೇರಿ
ಕುಳಿತವರ ಬುಡದಲ್ಲೂ
ಬಿಲಗಳಿವೆ!
ಅವರೂ–
ಹೇಳುವುದು ಹೀಗೇ: 'ನಿಮಗೇನು ಗೊತ್ತು?
ನಿಂತಿದ್ದೇವೆ ದೇಶವನ್ನೇ ಹೊತ್ತು!'

***

# ಕಾಲ

ಒಂದು ಮರ
ಧರೆಯ ಮೇಲೆ
ನೆರಳು ಹಾಸಿದೆ.
ದಣಿದು ಬಂದು
ಕುಳಿತ ಜನಕೆ
ಎಲೆಯು ಗಾಳಿ ಬೀಸಿದೆ.

ಮರದ ತುಂಬ
ಅರಳಿ ನಿಂತ
ಹೂವಿನಲ್ಲಿ ಮಧುವಿದೆ.
ಅದರ ಸವಿಯ
ಬಯಸಿ ಬಂದ
ದುಂಬಿವಿಂಡು ಹಾಡಿದೆ.

ಹಸಿರು ಮಡಿಲಿನಲ್ಲಿ
ಒಂದು ಹಕ್ಕಿ
ಗೂಡು ಕಟ್ಟಿದೆ.
ಪುಟ್ಟ ಪುಟ್ಟ
ಮರಿಗಳೆಲ್ಲಾ
ಒಟ್ಟುಗೂಡಿ ಕುಣಿದಿವೆ.

ಋತು ಚಕ್ರವು
ಉರುಳುತ್ತಿರೆ
ಮರವು ಹಸಿರು ತೊಟ್ಟಿದೆ.
ಹುಲು ಮನುಜನ
ಕೈಯೊಳಗೆ
ಕಡಿವ ಕೊಡಲಿ ಕಾದಿದೆ!



**ಕುಮಾರ ಚಲ್ಯ**

ಕಲೆ: ವಿಠ್ಠಲಪ್ಪ ಶಂ. ಹೂಗಾರ